**ದಿನಾಂಕ: 16.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಐ.ಬಿ.ಜಿ. ವಕೀಲರಿಂದ:**

1. ವಾದಿಯ ಗಂಡ ನನಗೆ ಚಿಕ್ಕವನಿಂದಲೂ ಪರಿಚಯಸ್ಥರು ಆಗಿರುತ್ತಾರೆ. ವಾದಿಯ ಗಂಡನ ಶಿಕ್ಷಣ ಎಷ್ಟು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಯ ಗಂಡನಿಗೆ ಹಿರಿಯರಿಂದ ಆಸ್ತಿ ಬಂದಿರುತ್ತದೆ ಎಂದರೆ ಸರಿ, ಎಷ್ಟು ಎಕರೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡ ಕಬ್ಬು, ಮೇಕ್ಕೆ ಜೋಳ ಬಳೆಯುತ್ತಿದ್ದು, ಅದರಿಂದ ಸಾಕಷ್ಟು ಉತ್ಪನ್ನ ಬರುತ್ತೀತ್ತು ಎಂದರೆ ಸರಿ.

2. ನಾನು ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯ ಗಂಡನ ಬಳಿ ಪ್ರತಿವಾದಿಯನ್ನು ಸನ್ 2014 ರಲ್ಲಿ ಕರೆದುಕೊಂಡು ಹೋಗಿರುತ್ತೇನೆ. ವಾದಿಯ ಗಂಡ ಬಡ್ಡಿ ವ್ಯವಹಾರ ಮಾಡುತ್ತಿರುತ್ತಾನೆ ಎಂದು ನನಗೆ ಗೊತ್ತಿರುತ್ತದೆ. ವಾದಿಯ ಗಂಡನಿಂದ 3-4 ಜನರಿಗೆ ಸಹಾಯ ಮಾಡಿಸಿರುತ್ತೇನೆ, ಅವರ ಹೆಸರು ಅಶೋಕ ರವರಿಗೆ 1 ಲಕ್ಷ ಮಾತ್ರ ಕೊಡಿಸಿರುತ್ತೇನೆ. ಸದರಿಯವರಿಗೆ ಹಣ ಕೊಡಿಸಿದ ಬಗ್ಗೆ ಪುಸ್ತಕದಲ್ಲಿ ನಮೂದು ಮಾಡಿಕೊಳ್ಳಲಾಗಿರುತ್ತದೆ.

3. ಪ್ರತಿವಾದಿಯ ತಂದೆಗೆ ಪಾಶ್ವವಾಯು ಆಗಿದ್ದು, ಹಣ ನೀಡುವಾಗ ನಾನು, 1 ಮತ್ತು 2 ನೇ ಪ್ರತಿವಾದಿ, ರೇವನಿ ರಾಠೋಡ ಇದ್ದೇವು, ಹಿರಿಯರು ಯಾರು ಇರಲ್ಲಿಲ್ಲಾ. ಪ್ರತಿವಾದಿಗೆ ಮೊದಲು 1 ಲಕ್ಷ ಹಣ ವಾದಿಯ ಗಂಡನಿಂದ ಕೊಡಿಸಿರುತ್ತೇನೆ. ಸಾಮಾನ್ಯವಾಗಿ ಹಣ ನೀಡಿದಾಗ ಚೆಕ್ ಅಥವಾ ಬಾಂಡನ್ನು ಬರೆಸಿಕೊಳ್ಳುತ್ತಾರೆ ಎಂದರೆ ಸರಿ. ಹಣ ನೀಡಿದಾಗ ಯಾವುದೇ ದಾಖಲಾತಿ ಬರೆಸಿಕೊಂಡಿರುವುದಿಲ್ಲ.

4. ನಾನು ಮತ್ತು ಪ್ರತಿವಾದಿ ಒಂದೇ ಜಾತಿಯವರು ಎಂದರೆ ಸರಿ. ವಾದಿಯು ಕುರಬ ಜನಾಂಗದವರು ಆಗಿರುತ್ತಾರೆ. ನನ್ನ ಮಗಳನ್ನು ಸಂಜಯ ರವರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಗಂಡನಿಗೆ ಪ್ರತಿವಾದಿಗೆ ಪ್ರತಿ ತಿಂಗಳು

ಬಡ್ಡಿಯನ್ನು ಕೊಟ್ಟಿರುವುದಿಲ್ಲ, ನಂತರ ಅಸಲು ಬಡ್ಡಿ ಸೇರಿ ಹಣವನ್ನು ಜಮಾ ಮಾಡಿರುತ್ತೇವೆ. ಅಸಲು ಮತ್ತು ಬಡ್ಡಿಯನ್ನು ಲೆಕ್ಕ ಮಾಡಿದ ಬಗ್ಗೆ ಯಾವುದೇ ದಾಖಲಾತಿ ಹಾಜರಪಡಿಸಿರುವುದಿಲ್ಲ.

5. ಹಣ ವಾಪಸ ನೀಡಿದ ಬಗ್ಗೆ ದಾಖಲಾತಿಯನ್ನು ಬರೆಸಿಕೊಂಡಿರುವುದಿಲ್ಲ. ಹಣದ ಭದ್ರತೆಗೋಸ್ಕರ ದಾಖಲಾತಿಯನ್ನು ಬರೆಸಿಕೊಡಲು ಬ.ಬಾಗೇವಾಡಿಯ ಮಿನಿ ವಿಧಾನ ಸೌಧಕ್ಕೆ ಹೋಗಿರುತ್ತೇವೆ. ಹಣಮಂತನ ಜೊತೆ ಯಾರು ಇರಲ್ಲಿಲ್ಲಾ, ನಾನು ಮತ್ತು ಪ್ರತಿವಾದಿಯರು ಇದ್ದೇವು. ದಸ್ತ ಬರಹಗಾರರಿಗೆ ಹಣ ನೀಡಿದ ಬಗ್ಗೆ ನಮೂದಿಸಬೇಕೆಂದು ದಸ್ತ ಬರಹಗಾರರಿಗೆ ವಾದಿಯ ಗಂಡ ತಿಳಿಸಿರುತ್ತಾರೆ. ದಸ್ತ ಬರಹಗಾರನಿಗೆ ಮಾಹಿತಿ ನೀಡಲು ವಾದಿಯ ಗಂಡ ಮತ್ತು 1 ನೇ ಪ್ರತಿವಾದಿ ಹೋಗಿರುತ್ತಾರೆ.

6. ವಾದಿಯ ಗಂಡನಿಗೆ ಪ್ರತಿವಾದಿಯರು ಸರ್ವೆ ನಂ.212/2 ಬಿ ಕ್ಷೇತ್ರ 4 ಎಕರೆಯಲ್ಲಿ 2 ಎಕರೆ ಜಮೀನನ್ನು ದಿಃ 30.04.2015 ರಂದು ಹಿಸಾರ ಪತ್ರ ನೋಂದಣ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸಮ್ಮನಿರುತ್ತಾರೆ. ನಂತರ ಸಾಕ್ಷಿಗೆ ಮತ್ತೊಮ್ಮೆ ಕೇಳಲಾಗಿ ಸದರಿ ಪತ್ರವನ್ನು ಹಣದ ಭದ್ರತೆಗಾಗಿ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಕಬ್ಜಾ ರಹಿತ ಕರಾರು ಪತ್ರ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಗೆ ಸಿ.ಎಸ್.ಗಾಯಕವಾಡ ಮತ್ತು ಆರ್.ವಿ. ರಾಠೋಡ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ.

7. ನಿಪಿ-1 ರಲ್ಲಿ ಹಣದ ಭದ್ರತೆಗಾಗಿ ದಾಖಲಾತಿಯನ್ನು ಬರೆದುಕೊಡುತ್ತಿದ್ದೇವೆ ಎಂದು ನಮೂದಿಸಿರುವುದಿಲ್ಲ. ಹಣವನ್ನು ನೀಡಿದ್ದಕ್ಕಾಗಿ ವಾದಿಯ ಗಂಡ ಪ್ರತಿವಾದಿಯಿಂದ ಯಾವುದೇ ದಾಖಲಾತಿಯನ್ನು ಬರೆಸಿಕೊಂಡಿರುವುದಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ಮಾರಾಟ ಮಾಡಲು ಇಚ್ಛಿಸಿದ್ದು ಅದಕ್ಕೆ ವಾದಿಯ ಗಂಡನು ತಾನೆ ಖರೀದಿ ಮಾಡುತ್ತೇ ಎಂದು ಹೇಳಿದಕ್ಕೆ ಪ್ರತಿವಾದಿಯರು ಖರೀದಿ ಹಿಸಾರ ಪತ್ರವನ್ನು

ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಲುಕ್ಸಾನ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**